**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**

**ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 28.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಿ ಸಿ ನಂಬರ- **778/18**
ಸಿಡಬ್ಲುಃ **5** ಪಿಡಬ್ಲು- **6**

ಸಾಕ್ಷಿದಾರರ ಹೆಸರು - ಬಸವರಾಜ ತಿಪ್ಪಣ್ಣ ನೇಸರಗಿ
ವಯಸ್ಸು - 32 ವರ್ಷ
ಉದ್ಯೋಗ - ನ್ಯಾಯವಾದಿ
ಸಾಕೀನ - ಉಪ್ಪಾರಹಟ್ಟಿ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರಿಂದ 4 ಮತ್ತು 6 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆರೋಪಿ ಪರ ವಕೀಲರು ಅಪರಾಧ ಪ್ರಕ್ರಿಯಾ ಸಂಹಿತೆಯ 317 ರಡಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ ಕುರಿತು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

2. ದಿ.22.12.2017 ರಂದು ಬೆಳಿಗ್ಗೆ 11.45 ಗಂಟೆಯ ಸಮಯದಲ್ಲಿ ನಾನು ಗೋಕಾಕ ನಗರದ ನಾನು ಮತ್ತು ಚಾಸಾ 4 ರವರು ಜಿ ಎಸ್ ಎಸ್ ಕಾಲೇಜಿನ ಮುಂದುಗಡೆ ಇದ್ದಾಗ ಚಾಸಾ 1 ರವರು ಅಂಚೆ ಇಲಾಖೆಯಿಂದ ತಮ್ಮ ಸೈಕಲ್ ಮೇಲೆ ಕುಳಿತು ಬಸವೇಶ್ವರ ಸರ್ಕಲ್ ಕಡೆಗೆ ಬರುತ್ತಿರುವಾಗ ಆರೋಪಿ ತನ್ನ ಕೆ ಎಸ್ ಆರ್ ಟಿ ಸಿ ಬಸ್ಸು ನಂಬರ ಕೆಎ-23/ಎಫ್-2083 ತೆಗೆದುಕೊಂಡು ಬಂದು ಚಾಸಾ 1 ರವರಿಗೆ ಬಂದು ಹಿಂದುಗಡೆಯಿಂದ ಹಾಯಿಸಿ ಅಪಘಾತಪಡಿಸಿರುತ್ತಾನೆ. ನಂತರ ನಾನು ಹಾಗೂ ಚಾಸಾ 4 ಹಾಗೂ ಸಾರ್ವಜನಿಕರು ಹೋಗಿ ನೋಡಲಾಗಿ ಚಾಸಾ 1 ರವರ ಎಡ ತಲೆಗೆ ಮತ್ತು ಎಡಗಾಲಿಗೆ ಪೆಟ್ಟು ಹತ್ತಿತ್ತು. ಬಸ್ಸಿನ ಚಾಲಕನ ಹೆಸರು ಶಿವನಿಂಗ ಹೊಸೂರು, ಸಾಃ ಸಾವಳಗಿ ಮತ್ತು ಬಸ್ಸಿನ ನಿರ್ವಾಹಕನ ಹೆಸರು ದಸ್ತಗೀರ ಮುಜಾವರ ಅಂತಾ ಗೊತ್ತಾಗಿರುತ್ತದೆ. ನಂತರ ನಾನು

ಚಾಸಾ 1 ರವರಿಗೆ ಚಿಕಿತ್ಸೆಗಾಗಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇನೆ. ತದನಂತರ ಚಾಸಾ 1 ರವರ ಮನೆಯವರು ಸಹ ಸರಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ಪೊಲೀಸರು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಸಂದರ್ಭ ದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಈ ಅಪಘಾತದಿಂದಾಗಿ ಚಾಸಾ 1ರವರು ಗೋಕಾಕ ಶಹರ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಈ ಘಟನೆಯ ಕುರಿತು ಪೊಲೀಸರ ಮುಂದೆ ದಿ. 25.12.2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ಚಾಸಾ 1 ರಿಂದ 3 , 5 ಮತ್ತು 6 ರವರು ಉಪ್ಪಾರಹಟ್ಟಿ ಗ್ರಾಮದವರು ಎಂದರೆ ಸರಿ. ಚಾಸಾ 1ರವರು ನನಗೆ ಪರಿಚಯಸ್ಥರು ಎಂದರೆ ಸರಿ. ನಾನು 2017 ರಲ್ಲಿ ಎಲ್ ಇ ಟಿ ಕಾಲೇಜ್, ಗೋಕಾಕನಲ್ಲಿ ಕಾನೂನು ವ್ಯಾಸಂಗ ಮಾಡುತ್ತಿದ್ದೆ ಎಂದರೆ ಸರಿ. ಕಾಲೇಜಿನ ಸಮಯ ಬೆಳಗ್ಗೆ 7.00 ಗಂಟೆಯಿಂದ ಮಧ್ಯಾಹ್ನ 1.30 ರ ವರೆಗೆ ಇತ್ತು ಎಂದರೆ ಸರಿ.

2. ದಿ.22.12.2017 ರಂದು ನಾನು ಗೋಕಾಕಿಗೆ ಬಂದಾಗ ಬೆಳಗ್ಗೆ 10.30 ಗಂಟೆ ಆಗಿತ್ತು. ನಮ್ಮ ಊರಿನಿಂದ ನಾನೊಬ್ಬನೇ ಸದರಿ ದಿನದಂದು ಗೋಕಾಕಿಗೆ ಬಂದಿದ್ದೆ. ಬೆಳಗ್ಗೆ 10.30 ಗಂಟೆಯ ಸಮಯದಲ್ಲಿ ನಾನು ಗೋಕಾಕಿನ ಆನಂದ ಟಾಕೀಜ್ ಬಳಿ ಇದ್ದೆ. ಸದರಿ ದಿನದಂದು ನಾನು ಲಕ್ಷ್ಮೀ ದೇವಿಯ ದರ್ಶನ ಪಡೆಯುವುದಕ್ಕಾಗಿ ಕೊಣ್ಣೂರಿಗೆ ಹೋಗುವ ಸಲುವಾಗಿ ಬಂದಿದ್ದೆ. ಆನಂದ ಟಾಕೀಜ್ ಕಡೆಯಿಂದ ನಾನು ಲಕ್ಷ್ಮೀ ಹೊಟೇಲ್‌ಗೆ, ತದನಂತರ

ನಡೆದುಕೊಂಡು ಬಂದು ಚಹಾ ಕುಡಿಯಲು ಹೋಗಿರುತ್ತೇನೆ. ಅಪಘಾತವಾಗಿರುತ್ತದೆ ಎನ್ನುವ ಸಂಗತಿ ನನಗೆ 11.15 ಗಂಟೆಯ ಸಮಯದಲ್ಲಿ ಗೊತ್ತಾಗಿರುತ್ತದೆ. ನನಗೆ ಸದರಿ ಸಂಗತಿ ಗೊತ್ತಾದಾಗ ನಾನು ಲಕ್ಷ್ಮೀ ಹೋಟೇಲ್ ನಲ್ಲಿ ಚಹಾ ಕುಡಿಯುತ್ತಿದ್ದೆ. ಅಪಘಾತವು ಹೇಗೆ ಆಗಿರುತ್ತದೆ ಎಂಬುವುದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಘಟನಾ ಸ್ಥಳದ ಬಳಿ ಹೋಗುವಷ್ಟರಲ್ಲಿ ಕೆಎ-23 ಎಫ್-2083 ರ ಬಸ್ಸು ಅಪಘಾತಪಡಿಸಿರುತ್ತದೆ ಎಂಬುವುದು ಗೊತ್ತಾಗಿತ್ತು ಎಂದು ನುಡಿಯುತ್ತಾರೆ. ಅಪಘಾತವಾಗಿರುತ್ತದೆ ಎಂಬುವುದನ್ನು ನಿಮಗೆ ಯಾರು ಹೇಳಿದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಜನರು ಕೂಡಿರುವುದನ್ನು ನೋಡಿ ನಾನು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

3. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲ ಸಂಗತಿಗಳು ನಿಜ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1ರವರು ನಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ತಿಳಿಸಿರುತ್ತೇನೆಂದರೆ ಸರಿಯಲ್ಲ. ಚಾಸಾ 1 ರವರು ಗೋಕಾಕಿನ ಯೋಗಿಕೊಳ್ಳ ರಸ್ತೆಯ ಬಳಿ ಇರುವ ಅಂಚೆ ಇಲಾಖೆಯಲ್ಲಿ ಕೂಲಿ ಕೆಲಸಗಾರನೆಂದು ಕೆಲಸ ಮಾಡುತ್ತಿರುವುದು ನನಗೆ ಗೊತ್ತಿರುತ್ತದೆ. ಆರೋಪಿ ಯಾವುದೇ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.

## ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ

**ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 28.10.2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಿ ಸಿ ನಂಬರ- **778/18**
ಸಿಡಬ್ಲುಃ **4** ಪಿಡಬ್ಲು- **5**

| | | |
|---|---|---|
| ಸಾಕ್ಷಿದಾರರ ಹೆಸರು | - | ಸಿದ್ಧಪ್ಪ ರಾಮಪ್ಪ ಚುನನ್ನವರ |
| ವಯಸ್ಸು | - | **54** ವರ್ಷ |
| ಉದ್ಯೋಗ | - | ಮನೆಕೆಲಸ |
| ಸಾಕೀನ | - | ಉಪ್ಪಾರಹಟ್ಟಿ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-**1** ರಿಂದ **3, 5** ಮತ್ತು **6** ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದು, ಆರೋಪಿ ಪರ ವಕೀಲರು ಅಪರಾಧ ಪ್ರಕ್ರಿಯಾ ಸಂಹಿತೆಯ **317** ರಡಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ ಕುರಿತು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿ.22.12.2017 ರಂದು ಬೆಳಿಗ್ಗೆ 11.45 ಗಂಟೆಯ ಸಮಯದಲ್ಲಿ ನಾನು ಗೋಕಾಕ ನಗರದ ನಾನು ಮತ್ತು ಚಾಸಾ5 ರವರು ಜಿ ಎಸ್ ಎಸ್ ಕಾಲೇಜಿನ ಮುಂದುಗಡೆ ಇದ್ದಾಗ ಚಾಸಾ 1 ರವರಿಗೆ ಆರೋಪಿ ತನ್ನ ಬಸ್ಸಿನಿಂದ ಅಪಘಾತಪಡಿಸಿರುವುದನ್ನು ನೋಡಿ ಓಡಿ ಹೋಗಿ ಚಾಸಾ **1** ರವರಿಗೆ ನೋಡಲಾಗಿ ಚಾಸಾ**1** ರವರ ಎಡಗಾಲಿಗೆ ಪೆಟ್ಟು ಆಗಿತ್ತು. ನಾವು ಕೂಡಲೇ ಚಾಸಾ **1** ರವರಿಗೆ ಸರಕಾರಿ ಆಸ್ಪತ್ರೆಗೆ ಒಯ್ದು ಚಿಕಿತ್ಸೆಗೆ ದಾಖಲಿಸಿರುತ್ತೇವೆ. ಅಪಘಾತಪಡಿಸಿದ ಕೆ ಎಸ್ ಆರ್ ಟಿ ಸಿ ಬಸ್ಸು ನಂಬರ ಕೆಎ**23**-ಎಫ್/**2083** ಆಗಿರುತ್ತದೆ. ಅಪಘಾತವಾದ ಸಂಗತಿಯನ್ನು ನಾನು ಚಾಸಾ **1**ರವರ ಮನೆಗೆ ಪೋನ ಮಾಡಿ ವಿಷಯ

ತಿಳಿಸಿರುತ್ತೇನೆ. ಈ ಪ್ರಕರಣದ ಕುರಿತು ನಾನು ತಿನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

1. ನನ್ನ, ಚಾಸಾ.1 ರಿಂದ 3 ಮತ್ತು ಚಾಸಾ 5 ಹಾಗೂ ಚಾಸಾ 6 ರವರ ಊರು ಉಪ್ಪಾರಹಟ್ಟಿ ಗ್ರಾಮ ಆಗಿರುತ್ತದೆ ಎಂದರೆ ಸರಿ. ನಾನು ಹಾಗೂ ಚಾಸಾ 6 ರವರು ಗೋಕಾಕಿನ ಲಕ್ಷ್ಮೀ ಹೋಟೇಲ್ ಬಳಿ ಇದ್ದಾಗ ಅಪಘಾತವಾಗಿರುತ್ತದೆ ಎನ್ನುವ ಸಂಗತಿ ನಮಗೆ ಗೊತ್ತಾದ ನಂತರ ನಾನು ಹಾಗೂ ಚಾಸಾ 6 ರವರು ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ. ಅಪಘಾತವಾಗಿರುವುದನ್ನು ಪ್ರತ್ಯಕ್ಷವಾಗಿ ನಾನು ನೋಡಿರುವುದಿಲ್ಲ ಎಂದರೆ ಸರಿ. ಗೋಕಾಕ ಬಸವೇಶ್ವರ ಸರ್ಕಲ್ ಇದು ಜನದಟ್ಟಣೆ ಮತ್ತು ವಾಹನ ದಟ್ಟಣೆಯಿಂದ ಕೂಡಿದ ಸ್ಥಳವಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ವಾಹನಗಳು ನಿಧಾನಗತಿಯಲ್ಲಿ ಹೋಗುತ್ತವೆ ಎಂದರೆ ಸರಿ.

2. ಆರೋಪಿಯ ಹೆಸರು ಏನಿರುತ್ತದೆ ಎಂಬುವುದು ನನಗೆ ಗೊತ್ತಿರುವುದಿಲ್ಲ. ಅದರಂತೆ ಸದರಿ ಬಸ್ಸಿನ ನಿರ್ವಾಹಕನ ಹೆಸರು ಏನು ಇರುತ್ತದೆ ಎಂಬುವುದು ಸಹ ನನಗೆ ಗೊತ್ತಿರುವುದಿಲ್ಲ. ನಾನು ತನಿಖಾಧಿಕಾರಿಗಳ ಮುಂದೆ ನೀಡಿದ ನನ್ನ ಹೇಳಿಕೆಯಲ್ಲಿ ಆರೋಪಿಯ ಹೆಸರಾಗಲೀ, ಬಸ್ಸಿನ ಚಾಲಕನ ಹೆಸರಾಗಲೀ ಹೇಳಿ ಬರೆಸಿರುವುದಿಲ್ಲ. ಆರೋಪಿ ಸೈಕಲ್ ಮೇಲೆ ಹೋಗುವಾಗ ಬಿದ್ದು ಪೆಟ್ಟು ಹಚ್ಚಿ ಕೊಂಡಿದ್ದ ಎಂದರೆ ಸರಿಯಲ್ಲ. ಪರಿಹಾರ ಪಡೆಯುವುದಕ್ಕಾಗಿ ಚಾಸಾ 1 ರವರು ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪಘಾತವನ್ನು ಮಾಡದೇ ಇದ್ದರೂ ಸಹ ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಸ್ನೇಹಿತನಾಗಬೇಕು ಎಂದರೆ ಸರಿ. ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನನ್ನ ಮುಖ್ಯ ವಿಚಾರಣೆಯಲ್ಲಿ

ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನಗೆ 10 ನಿಮಿಷಗಳು ಕಳೆದ ಮೇಲೆ ಗೊತ್ತಾಗಿರುತ್ತದೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.